**ಅಸಲು ದಾವಾ ಸಂಖ್ಯೆ - 115/2023** **ಡಿ.ಡಬ್ಲ್ಯೂ:-1**

ದಿನಾಂಕಃ **16.09.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು :- ವಾದಿ ಪರ ವಕೀಲರಿಂದ :-

ನನ್ನ ಅಜ್ಜನ ಹೆಸರು ಕುಂಟಹನುಮಂತಪ್ಪ. ಸರ್ವೆ ನಂ. 74/1 ರಲ್ಲಿ 3 ಎಕರೆ ಜಮೀನು ನನ್ನ ಅಜ್ಜನ ಹೆಸರಿನಲ್ಲಿ ಇದೆ ಎಂದರೆ ಸರಿ. ನಮ್ಮ ಅಜ್ಜ ತೀರಿಕೊಂಡ ನಂತರ ಸದರಿ ಆಸ್ತಿ ನನ್ನ ಅಜ್ಜಿ ರಂಗಮ್ಮ, ನನ್ನ ತಂದೆ ಶೇಷಗಿರಿಯಪ್ಪ, ಸಿದ್ದಪ್ಪ ಮತ್ತು ಹನುಮಂತಪ್ಪರವರ ಹೆಸರಿಗೆ ಜಂಟಿಯಾಗಿ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಅಜ್ಜಿ ಮತ್ತು ನನ್ನ ತಂದೆಯ ಹೆಸರಿನಲ್ಲಿ ಜಂಟಿಯಾಗಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಎಂ ಆರ್ ನಂ. 41/83-84 ರಂತೆ ನಮ್ಮ ಅಜ್ಜ ತೀರಿಕೊಂಡ ನಂತರ ಸರ್ವೆ ನಂ. 74/1 ರಲ್ಲಿ 3 ಎಕರೆ ಜಮೀನು ನನ್ನ ಅಜ್ಜಿ, ನನ್ನ ತಂದೆ, ಸಿದ್ದಪ್ಪ ರವರ ಹೆಸರಿಗೆ ಜಂಟಿಯಾಗಿ ಖಾತೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 75 ರಲ್ಲಿ 1 ಎಕರೆ ಜಮೀನನ್ನು 1975-76 ನೇ ಸಾಲಿನಿಂದಲೂ ನಮ್ಮ ಅಜ್ಜ ಮತ್ತು ನಮ್ಮ ಕುಟುಂಬದವರು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಆಸ್ತಿಯು ನನ್ನ ತಾಯಿಯ ಸ್ವಯಾರ್ಜಿತ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಯಾಗಿದ್ದರಿಂದ ದಾವಾ ಆಸ್ತಿಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಗೆ ಸಮಾನ ಹಕ್ಕು ಮತ್ತು ಹಿತ್ತಾಸಕ್ತಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಐಟಂ ನಂ.1 ರ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿದ್ದು ಅದರಲ್ಲಿ ಮಾತ್ರ ವಾದಿ ಮತ್ತು ಪ್ರತಿವಾದಿಗಳಿಗೆ ಸಮಾನವಾದ ಭಾಗಂಶದ ಹಕ್ಕು ಮತ್ತು ಹಿತ್ತಾಸಕ್ತಿ ಇದೆ ಆದರೆ ಐಟಂ ನಂ. 2 ನನ್ನ ತಾಯಿಯ ಸ್ವಯಾರ್ಜಿತ ಆಸ್ತಿ ಆಗಿರುವುದರಿಂದ ವಾದಿ ಮತ್ತು ಪ್ರತಿವಾದಿಗಳಿಗೆ ಯಾವುದೇ

ಹಕ್ಕು ಮತ್ತು ಹಿತ್ತಾಸಕ್ತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಮ್ಮ ಕುಟುಂಬದಲ್ಲಿ ಇಲ್ಲಿಯವರೆಗೂ ಕುಟುಂಬದ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ವಿಭಾಗ ಪತ್ರವನ್ನು ಮಾಡಿಕೊಂಡಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ಆದರೆ ಪಂಚಾಯಿತಿಯಲ್ಲಿ ಬಾಯಿಮಾತಿನ ಮೂಲಕ ವಿಭಾಗ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ದಾವಾ ಆಸ್ತಿಗಳಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪಂಚಾಯಿತಿಯಲ್ಲಿ ಯಾವುದೇ ಮಾತುಕತೆಯಾಗದೇ ಇದ್ದರೂ ಸಹ ಮಾತುಕತೆಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚಾಯಿತಿಯಲ್ಲಿ ವಿಭಾಗ ಆದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಐಟಂ ನಂ.2 ರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಐಟಂ ನಂ. 1 ಮತ್ತು 2 ರ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿದ್ದರಿಂದ ವಾದಿ ಮತ್ತು ಪ್ರತಿವಾದಿಗಳಿಗೆ ಸಮಾನವಾದ ಭಾಗಂಶದ ಹಕ್ಕು ಮತ್ತು ಹಿತ್ತಾಸಕ್ತಿ ಇದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಆಸ್ತಿಯು ಒಟ್ಟು ಕುಟುಂಬದ ಪರವಾಗಿ ನಿಮ್ಮ ತಾಯಿಯ ಹೆಸರಿಗೆ ಮಂಜೂರಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.